

ಚಿತ್ರಗಳು ಆ್ಯಂಟಿಕ್ ಒಡವೆಗಳಲ್ಲಿ ಒಡಮೂಡಿದಾಗ ಅಲ್ಲಿ ಭಾವನಾತ್ಮಕ ಸಂವೇದನೆಗಳು ಸೃಷ್ಟಿಯಾಗುತ್ತವೆ. ಒಡವೆಗಳಿಗೆ ಜೀವಕಳೆಯೂ ಬರುತ್ತದೆ, ಆ್ಯಂಟಿಕ್ ಜುಮುಕಿ ಜೊತೆಗೆ ಚಾಂದ್‌ಬಾಲಿಯಂತಹ ಅಗಲವಾದ ಕಿವಿಯೋಲೆ ರೇಷ್ಮೆ ಸೀರೆಗೆ ಸಖತ್ ಹೊಂದುತ್ತದೆ. ಆ್ಯಂಟಿಕ್ ಒಡವೆಗಳು ಉಡುಪಿನ ಅಂದ, ಹೆಣ್ಣಿನ ಒಟ್ಟಂದ ಹೆಚ್ಚಿಸುವಲ್ಲಿ ಸಹಕಾರಿಯಾಗುತ್ತದೆ' ಎಂದು ಹೇಳುತ್ತಾರೆ ಬೆಂಗಳೂರಿನ ಜಯನಗರದಲ್ಲಿರುವ ಖಂಡಾಲ ಜ್ಯುವೆಲ್ಲರಿಯ ವ್ಯವಸ್ಥಾಪಕ ಶ್ರೀಕಾಂತ್.

'ಈಗ ಬೇಸಿಗೆ ಕಾಲ, ಮದುವೆಯ ಸೀಸನ್ ಕೂಡ ಹೌದು. ಈಗೀಗ ಒಡವೆ ದುಬಾರಿಯಾದರೂ ಮದುವೆ ಎಂದ ಮೇಲೆ ಖರೀದಿ ಮಾಡದೆ ಉಪಾಯವಿಲ್ಲ. ಮದುಮಗಳಿಗಾಗಿಯೇ ಆ್ಯಂಟಿಕ್ ಒಡವೆಗಳು ಲಭ್ಯ. ನೆಕ್ಲೇಸ್, ಕಿವಿಯೋಲೆ, ಬಳೆಗಳು, ಉಂಗುರಗಳನ್ನು ಧರಿಸಿದರೆ ಮದುಮಗಳು ಇನ್ನಷ್ಟು ಮಿಂಚುತ್ತಾಳೆ. ಚಿನ್ನದಲ್ಲಿ ಮಾಡಿದ ಥರಾವರಿ ಆಭರಣಗಳ ಜತೆಗೆ ಮದುವೆಗೆ, ಪಾರ್ಟಿಗೆ, ಶುಭ ಕಾರ್ಯಕ್ರಮಕ್ಕೆ ಹೋಗುವ ಮಹಿಳೆಯರು ಹೊಸ ಹೊಸ ವಿನ್ಯಾಸಗಳ ಒಡವೆಗಳತ್ತ ಮುಖ ಮಾಡಿದ್ದಾರೆ. ಇದೇ ಸಾಲಿಗೆ ಸೇರುವ ಆಭರಣಗಳಲ್ಲಿ ಆ್ಯಂಟಿಕ್ ಸಂಗ್ರಹವೂ ಒಂದು' ಎನ್ನುತ್ತಾರೆ ಅವರು.

ದೇವಾನುದೇವತೆಗಳ ಆ್ಯಂಟಿಕ್ ಒಡವೆ ಸಂಗ್ರಹದಲ್ಲಿ ದಕ್ಷಿಣ ಭಾರತದ ವಿವಿಧ ದೇವಾಲಯಗಳಲ್ಲಿರುವ ದೇವತೆಗಳ ವಿಗ್ರಹಗಳಿಂದ ಪ್ರೇರಿತವಾಗಿ ತಯಾರಿಸಿದ ಆಭರಣಗಳಿದ್ದು, ಮಹಿಳೆಯರು ಹೆಚ್ಚು ಇಷ್ಟಪಡುವಂತಿವೆ. ವಧು ಧರಿಸುವ ಸಾಂಪ್ರದಾಯಿಕ ಮತ್ತು ಸಮಕಾಲೀನ ಆಭರಣಗಳಿಗೆ ಆ್ಯಂಟಿಕ್‌ನಲ್ಲೇ ಹೊಸ ಟಚ್ ನೀಡಿದ್ದು ಮದುಮಗಳು ಈ ವಿಶೇಷ ದಿನದಂದು ಮತ್ತಷ್ಟು ಆಕರ್ಷಕವಾಗಿ ಮಿಂಚಲು ಕಾರಣವಾಗಿದೆ.

'ಆ್ಯಂಟಿಕ್ ಆಭರಣಗಳು ಬರೀ ಯುವತಿಯರನ್ನಷ್ಟೇ ಅಲ್ಲದೆ ಎಲ್ಲ ವಯೋಮಾನದವರನ್ನು ಸೆಳೆಯುತ್ತವೆ. ಪುರುಷರು ಕೂಡ ಬ್ರೇಸ್ಲೆಟ್, ಪದಕ, ಉಂಗುರ ಮುಂತಾದ ಒಡವೆಗಳಿಗೆ ಆ್ಯಂಟಿಕ್‌ಗೇ ಆದ್ಯತೆ ನೀಡುತ್ತಿದ್ದಾರೆ. ಏಕೆಂದರೆ ಈ ಒಡವೆಗಳು ಎಲ್ಲ ರೀತಿಯ ಉಡುಗೆಗಳಿಗೆ ಮ್ಯಾಚ್ ಆಗುತ್ತದೆ. ಸಾಂಪ್ರದಾಯಿಕ ಆಭರಣ ಶ್ರೇಣಿಯಡಿ ಗೆಜ್ಜೆ ಮಾಲಾಕ್, ಕೆಂಪು ಹರಳಿನ ನೆಕ್ಲೇಸ್, ಜುಮುಕಿ, ಕಿವಿಯೋಲೆ, ಬಳೆಗಳು, ಪಚ್ಚೆ, ರೂಬಿ, ವಜ್ರ, ಮಾಣಿಕ್ಯ ಹಾಗೂ ಚಿನ್ನದಿಂದ ತಯಾರಿಸಿದ ಆಕರ್ಷಕ ಮಾಂಗ್ಟೀಕಾ, ಬೈತಲೆಬೊಟ್ಟುಗಳು, ವಂಕಿಗಳು ಲಭ್ಯ. ಈ ಸಂಗ್ರಹವು ವಧುವಿನ ವೈಭವಕ್ಕೂ ಸರಿ ಹೊಂದುವಂತಿದೆ' ಎನ್ನುತ್ತಾರೆ ಶ್ರೀಕಾಂತ್.

## ಆಕರ್ಷಕ ಕುಸುರಿ ಕೆತ್ತನೆಯ ಒಡವೆಗಳು

ಒಡವೆಯ ಮೇಲೆ ಹರಳುಗಳು ಬಣ್ಣದ ಮಾಯಾಲೋಕವನ್ನೇ ಸೃಷ್ಟಿಸುತ್ತವೆ. ಚಿನ್ನದ ಅಡಿಪಾಯವಿರುವ ಒಡವೆಗೆ ಅಮೆರಿಕನ್ ಡೈಮಂಡ್, ಕಲರ್ ಡೈಮಂಡ್, ಹವಳ, ರೂಬಿ, ಎಮರಾಲ್ಡ್ ಮುಂತಾದ ನವರತ್ನಗಳನ್ನು ಸೇರಿಸಿ ಕುಸುರಿ ಕೆತ್ತನೆ ಮಾಡಿರುವ ಒಡವೆಗಳು 'ಎವರ್‌ಗ್ರೀನ್' ಆಗಿ ಮಿಂಚುತ್ತವೆ. ಕಾಸಿನ ಸರ, ಗೆಜ್ಜೆ ಮಾಲಾಕ್, ಕೊತ್ತಂಬರಿ ಹಾರ, ಮುಷ್ಟಿ ಸರ, ಕಂಠೀಹಾರ, ಕಿವಿಯೋಲೆಗಳು ಕುಸುರಿ ಕೆತ್ತನೆಯಲ್ಲಿ ಬಂದು ತೊಟ್ಟುಕೊಂಡಾಗ ಅದರ ಸೊಬಗೇ ವರ್ಣಿಸಲಸದಳ.

ಚಿನ್ನದ ಗುಂಡುಗಳನ್ನು ದಾರದಲ್ಲಿ ಪೋಣಿಸಿ ತಯಾರಿಸಿದ ಹಗುರವಾದ ಆಭರಣ ಜೋಮಾಲೆ ಕೂಡ ಫ್ಯಾಷನ್ ಲೋಕದಲ್ಲಿ ಭದ್ರವಾಗಿದೆ. ಜೋಮಾಲೆ 'ಕೊಡಗಿನ ಕೊಡುಗೆ'. ಆದರೆ ಅದೀಗ ಎಲ್ಲ ಭಾಗಗಳಲ್ಲೂ ಮಹಿಳೆಯರು ಇಷ್ಟಪಟ್ಟು ಧರಿಸುವ ವಿಶಿಷ್ಟ ಆಭರಣಗಳಲ್ಲೊಂದಾಗಿದೆ.

ಇವೆಲ್ಲದರ ಜೊತೆಗೆ ಚಂದ್ರನನ್ನೇ ಹೋಲುವ ಚಂದ್ರಾಭರಣ ಲೇಟೆಸ್ಟ್ ಟ್ರೆಂಡ್. ಈ ಆಭರಣ ಪದಕ, ಓಲೆ, ವೈವಿಧ್ಯಗಳಲ್ಲಿ ಲಭ್ಯವಿದೆ. ಸೀರೆ, ಚೂಡಿದಾರ್, ಲೆಹೆಂಗಾ... ಹೀಗೆ ಯಾವುದೇ ತರಹದ ಉಡುಪಿಗೂ ಮ್ಯಾಚ್ ಆಗುವಂತಿದೆ.



## ಕುಂದನ್ ನೆಕ್ಲೇಸ್

ಈಗೀಗ ಕುಂದನ್ ನೆಕ್ಲೇಸ್‌ಗೆ ಭಾರೀ ಬೇಡಿಕೆ. ಚಿನ್ನದ ಸರದ ಮೇಲೆ ಕುಂದನ್ ಹರಳುಗಳು ಅಂದ ಹೆಚ್ಚಿಸಲು ಸಹಕಾರಿ. ಇದು ದುಬಾರಿಯಾಗಿದ್ದು, ರಾಯಲ್ ಲುಕ್ ಕೊಡುತ್ತದೆ. ದುಬಾರಿಯಾಗಿರುವ ಕುಂದನ್ ನೆಕ್ಲೇಸ್ ಫ್ಯಾಷನಬಲ್ ಆಗಿಯೂ ಕಂಗೊಳಿಸುತ್ತದೆ. ಫ್ಯಾಷನ್ ಜಗತ್ತು ನಿಂತ ನೀರಲ್ಲ. ಅದು ಸದಾ ಹರಿಯುವ, ಪ್ರವಹಿಸುವ ನೀರ ಸೆಲೆ. ಒಡವೆಗಳು ಎಂದೆಂದೂ ಮಹಿಳೆಯರನ್ನು ಸೆಳೆಯುವ ಅಮೂಲ್ಯ ಮುತ್ತು! ■